## ಡೇಟಾ ದೇವರು

ಗುರುರಾಜ್ ದಾವಣಗೆರೆ ಅವರು ಜ. 14ರ ಸಂಚಿಕೆಯಲ್ಲಿ ಬರೆದಿರುವ 'ಡೇಟಾ ದೇವರು; ಅಲ್ಗೋರಿಥರ್ಮ್' ಲೇಖನ ಆಳವಾದ ಅಧ್ಯಯನದಿಂದ ಕೂಡಿತ್ತು. ಹಾಗೆಯೇ ಪ್ರಚಲಿತ ತಂತ್ರಜ್ಞಾನಗಳ ಅಪರಿಮಿತ ಸಾಧ್ಯತೆಗಳ ಜೊತೆಗೆ ಒಳಿತು, ಕೆಡುಕು ಎರಡೂ ಮಗ್ಗಲುಗಳ ಪರಿಚಯವನ್ನು, ಎಗ್ಗಿಲ್ಲದೆ ಬಳಸುವ ಎಲ್ಲರಿಗೂ ಮಾಡಿಸುವಂತಿತ್ತು. ಕನ್ನಡ ಪತ್ರಿಕೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಲೇಖನ ಪ್ರಕಟವಾಗಿದ್ದು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಯಾದ ನನಗಂತೂ ಹೆಮ್ಮೆಯ ವಿಷಯ.

—ರವೀಶ್ ಕುಮಾರ್, ಬೆಂಗಳೂರು

ಅಬ್ಬಾ! ಈ ಲೇಖನ ಓದುತ್ತಾ ಹೋದಂತೆ, ನಮಗೆ ಅರಿವಿಲ್ಲದ ಕ್ಷೇತ್ರದ ಬಗ್ಗೆ ನಾವು ಎಷ್ಟು ಮುಗ್ಧತೆಯಿಂದ—ಮೂರ್ಖರಾಗಿ ವ್ಯವಹರಿಸುತ್ತಿದ್ದೀವಿ ಅನ್ನಿಸಿತು. 70 ವರ್ಷ ದಾಟಿರುವ ನಮ್ಮಂಥ ಅನೇಕರಿಗೆ ಇದೊಂದು ಅತ್ಯಂತ ಉಪಯುಕ್ತ ಮಾಹಿತಿ ಕೊಡುವ ಪ್ರಯತ್ನವಾಗಿದೆ. ಮೊಬೈಲ್ ಉಪಯೋಗಿಸುವುದು ಗೊತ್ತೇ ಹೊರತು, ಅದರ ಹಿಂದೆ ಇಷ್ಟೆಲ್ಲ ಸಂಕೀರ್ಣತೆ ಇರುವುದು, ನಮ್ಮೆಲ್ಲ ಮಾಹಿತಿ ಸಂಗ್ರಹದ ವಿಧಾನ, ನಮ್ಮ ಯೋಚನಾಲಹರಿಗೆ ಕನ್ನಹಾಕುವ



ರೀತಿ ಗೊತ್ತಿರಲಿಲ್ಲ. ಓದುತ್ತ ಒಂದು ರೀತಿಯ ಭಯ ಹುಟ್ಟಿಸುತ್ತದೆ. ಸಾಕಷ್ಟು ವಿಶದವಾಗಿ ಅರ್ಥವಾಗುವಂತೆ ವಿವರಣೆ ನೀಡಿದ್ದಾರೆ.

—ಶ್ಯಾಮಲಾ ಎಚ್. ಎಸ್.
ಮಹೇಶ್ ಹಿರಂಡಗಿ

ಮುಖಪುಟ ಲೇಖನ ಒಂದು ರೀತಿಯ ವಿಭ್ರಮೆಗೆ ಗುರಿ ಮಾಡಿತು. ನಮ್ಮ ವರ್ತಮಾನವನ್ನು ಕಲ್ಪನಾತೀತವಾಗಿ ಪ್ರಭಾವಿಸುತ್ತಿರುವ, ನಮ್ಮ ಭವಿಷ್ಯವನ್ನು ಬಹುಶಃ ಸಂಪೂರ್ಣವಾಗಿ ಆಳಲಿರುವ ಡೇಟಾ ದೇವರು, ಅಲ್ಗೊರಿಥರ್ಮ್‌ದ ಸವಿಸ್ತಾರ ಮಾಹಿತಿ ದಂಗುಬಡಿಸಿತು. ಆಶ್ಚರ್ಯಪಡಬೇಕೆ, ಆತಂಕಪಡಬೇಕೆ ತಿಳಿಯುತ್ತಿಲ್ಲ. ಪ್ರಾಕೃತಿಕವಾದ ಸಹಜ ಬಾಳು ಮುಂಬರುವ ಪೀಳಿಗೆಗಳಿಗೆ ಕನಸೇ ಆಗಬಹುದೇ?

—ವಿದ್ಯಾ ಶಿರಹಟ್ಟಿ, ಧಾರವಾಡ

ಲೇಖನದುದ್ದಕ್ಕೂ ಡೇಟಾ ಹಾಗೂ ಅಲ್ಗೋರಿದಂ ಬಗ್ಗೆ ಬಹಳ ಸೊಗಸಾದ ವಿವರಣೆ ಇದೆ. ಆತ್ಮಹತ್ಯೆಯೊಂದಿಗೆ ಜೀವನ ಕಳೆದುಕೊಂಡ, ಮಾಹಿತಿ ಸ್ವಾತಂತ್ರ್ಯ ಮತ್ತು ಮಾಹಿತಿಯ ಮುಕ್ತ ಲಭ್ಯತೆಯ ಬಗ್ಗೆ ಮೊದಲು ಮಾತನಾಡಿದ ಅಮೆರಿಕದ 26ರ ಯುವಕ ಅರೋನ್ ಸ್ವಾರ್ಟ್ಜ್‌ನ ಬಗ್ಗೆ ತಿಳಿದು ಬಹಳ ಬೇಸರವೆನಿಸಿತು. ಅಲ್ಲದೇ ತನಗೆ ಸ್ತನ ಕ್ಯಾನ್ಸರ್ ಇದೆ ಎಂದು ಮುಕ್ತವಾಗಿ ಜಗತ್ತಿಗೆ ಹೇಳಿದ ಹಾಲಿವುಡ್ ಏಂಜಲಿನಾ ಜೂಲಿ ಇನ್ನೂ ಮುಂತಾದ ವಿಷಯಗಳನ್ನು ಲೇಖಕರು ಬಹಳ ಸುದೀರ್ಘವಾಗಿ ವಿವರಿಸಿದ್ದಾರೆ.

—ಎಲ್.ಪಿ.ಕುಲಕರ್ಣಿ, ಬಾದಾಮಿ

'ಅಲ್ಗೋರಿಥರ್ಮ್' ಉಪಯುಕ್ತ ಮಾಹಿತಿಗಳಿಂದ ಬೆರಗುಗೊಳಿಸುವ ಲೇಖನ. ಲೇಖಕರ ಕಥನ ಶೈಲಿಯನ್ನು ಗಮನಿಸಿದರೆ, ಅವರ ಮೇಲೆ ಎಚ್. ಜಿ. ವೇಲ್ಸ್ ಅವರಂಥ ಕೌತುಕ ಬರಹಗಾರರ ದಟ್ಟ ಪ್ರಭಾವ ಇರಬಹುದು ಎನಿಸಿತು. ಮೆಗಲಾನ್‌ನ ಭೂ ಪ್ರದಕ್ಷಿಣೆಯಂತೆ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸುತ್ತಾ ಸಾಗುವ ಲೇಖನದಲ್ಲಿ, 2020ರ ದುಃಸ್ವಪ್ನ ಕೊರೊನಾ ಕುರಿತಾದ ಅಲ್ಗೋರಿದಂನ ಸಮೀಕರಣ ಇಲ್ಲದೇ ಹೋದದ್ದು ಕೊರತೆಯೆನಿಸಿತು.

—ಶಂಕರ್ ಸೊರೊವನಹಳ್ಳಿ, ಮಾಯಸಂದ್ರ



## ರಂಗಸಂಗೀತದ ಪರಮಪದ

ಜ. 14ರ ಸಂಚಿಕೆಯಲ್ಲಿ ಗುಡಿಹಳ್ಳಿ ನಾಗರಾಜ್ ಬರೆದಿರುವ 'ರಂಗಸಂಗೀತದ ಪರಮಪದ ಪರಮಶಿವನ್' ಲೇಖನ ಚೆನ್ನಾಗಿತ್ತು. ವೃತ್ತಿರಂಗಭೂಮಿಯ ಸಂಗೀತ ಮಾಂತ್ರಿಕನ ಬಗ್ಗೆ ನೀವು ತೋರಿದ ಅಕ್ಕರೆಗೆ ರಂಗಭೂಮಿಯ ಎಲ್ಲರ ಪರವಾಗಿ ಧನ್ಯವಾದ. ಆಧುನಿಕ ರಂಗಭೂಮಿಯ ಮಹಾನ್ ಚೇತನವಾಗಿ ಸಾಧನೆಗೈದ ಮಹನೀಯರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದವರು ನಮ್ಮ ಪರಮಶಿವು.

— ಬಾಬು ಹಿರಣ್ಣಯ್ಯ
ಅಂಚೆ ಸುಬ್ರಹ್ಮಣ್ಯ, ಬೆಂಗಳೂರು

ಪರಿಧಿಯನು ದಾಟಿ ಪರದೆಡೆಗೆ ನಡೆದ ಪರಮಶಿವನ್ ಕುರಿತ ಲೇಖನ ಸೊಗಸಾಗಿತ್ತು. ಅದು ಸಂಗೀತದ ಕಣಜ. ತೆಗೆದಷ್ಟೂ ಉಕ್ಕುವ ಬತ್ತದ ಚಿಲುಮೆ.

—ಬೆಳ್ಳಿಬಟ್ಟಲು ರಾಮಚಂದ್ರರಾವ್

## ಸ್ವರ್ಗಪ್ರಾಪ್ತಿ

ಜ. 14ರಂದು ಸಂತೋಷಕುಮಾರ ಮೆಹಂದಳೆ ಬರೆದಿರುವ 'ಸ್ವರ್ಗಪ್ರಾಪ್ತಿ' ಕಥೆ ಅತಾರ್ಕಿಕ, ತಲೆ ಬುಡವಿಲ್ಲದ ಊಹಾಲೋಕ. ಇದನ್ನು ಯಾವ ಗ್ರಂಥ ಅಥವಾ ಪುರಾಣದ ಆಧಾರದ ಮೇಲೆ ಬರೆಯಲಾಗಿದೆ ಎನ್ನುವ ವಿಷಯವನ್ನು ಹೇಳಬೇಕಿತ್ತು.

—ಎ.ಎಚ್. ಪ್ರಸನ್ನ ಗಣಪತಿ

ಮಹಾಭಾರತದ ಕಥೆಯನ್ನು ತಿರುಚಿದ್ದು ಇಷ್ಟವಾಗಲಿಲ್ಲ. ಹೀಗೆ ಓದಿ ಹಾಗೆ ಮರೆಯುವಂತಿದೆ.

—ಮಹದೇವಸ್ವಾಮಿ, ತುಮಕೂರು

## ಟೀಕೆಗೂ ಸೌಂದರ್ಯ ಸ್ಪರ್ಶ

ಜ. 14ರ ಸಂಚಿಕೆಯ ಪಾಲನೆ—ಪೋಷಣೆ ಪುಟದಲ್ಲಿ ಸ್ವಯಂಪ್ರಭಾ ಅವರ 'ಟೀಕೆಯ ಬಾಣಗಳಿಗೂ ಇರಲಿ ಸೌಂದರ್ಯ ಸ್ಪರ್ಶ' ಲೇಖನ ಪಾಲಕರಿಗೆ ಉಪಯುಕ್ತ ಬರಹವಾಗಿದೆ. ಪಾಲಕರು ಮಾಡುವ ಟೀಕೆಗಳು ತಮ್ಮ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಮಾರಕವಾಗುವ ಅಂಶಗಳನ್ನು ನಾವೆಲ್ಲರೂ ಗ್ರಹಿಸಬೇಕಾಗಿದೆ.

—ಜಗದೀಶ ಬಿ. ಗೌಡ, ಧಾರವಾಡ

'ಟೀಕೆಗೂ ಇರಲಿ ಸೌಂದರ್ಯ ಸ್ಪರ್ಶ' ಲೇಖನ ಮನುಷ್ಯನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಯಾರೇ ಆಗಿರಲಿ, ಟೀಕೆಗಳಿಗೂ ಒಂದು ತೂಕವಿದೆ. ಅದು ಎದುರಾಳಿಗಳಿಗೆ ಮಾನಹಾನಿ ಆಗದಂತೆ ಅವರ ತಪ್ಪಿನ ಅರಿವು ಮೂಡಿಸುವಂತಿರಬೇಕು.

—ವಿದ್ಯಾ ಶೆಣೈ, ಕುಂದಾಪುರ

## ಭಾವೇಶ್ ಭಾಟಿಯಾ



ನೇಮಿಚಂದ್ರ ಅವರ ಧಾರಾವಾಹಿ 'ಭಾವೇಶ್ ಭಾಟಿಯಾ' ಬಹಳ ಚೆನ್ನಾಗಿ ಬರುತ್ತಿದೆ. ಮನುಷ್ಯ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಅದಕ್ಕೆ ಅವನ ದೈಹಿಕ ನ್ಯೂನತೆಗಳು ಅಡ್ಡ ಬರುವುದಿಲ್ಲ ಎಂಬುದಕ್ಕೆ ಒಳ್ಳೆಯ ಉದಾಹರಣೆ. ತನ್ನಂತೆ ಅಂಧರಾದವರನ್ನು ಕೆಲಸಕ್ಕೆ ತೆಗೆದುಕೊಂಡು ಸ್ವಾಭಿಮಾನದಿಂದ ಜೀವಿಸುವುದಕ್ಕೆ ಸಹಾಯ ಮಾಡಿದ ಭಾವೇಶ್ ಅವರನ್ನೂ ಹಾಗೂ ಅವರ ಸ್ವಾಭಿಮಾನವನ್ನೂ ಮೆಚ್ಚಲೇಬೇಕು.

—ಕೆ. ಎಸ್. ಸವಿತ,
ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ—ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ—ಮೇಲ್: feedback@sudha.co.in